account of ill-health. Hence I request I may be given permission to absent myself from the deliberations of the Assembly. "

Is it the pleasure of the Assembly that permission be granted to Srimathi Allam Sumangalamma for being absent from the meetings of the Assembly for two months ?

Hon'ble MEMBERS —Yes.

Mr. SPEAKER.—Necessary permission is granted.

MEMBERS' REPRESENTATIONS

ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಗಳೇ, ನಿನ್ನೆಯದಿವಸ ಈ ಸಭೆಯಲ್ಲಿ.....

ಅಧ್ಯಕ್ಷರು.—ಮಾನ್ಯ ಸದಸ್ಯರು ಕುಳಿತುಕೊಳ್ಳಿ ಬೇಕು.

ಶ್ರೀ ಎನ್. ಜಿ. ನರಸಿಂಹೇಗೌಡ.—ನಾನು ಹೇಳುವದನ್ನು ತಾವು ದಯವಿಟ್ಟು ಕೇಳಬೇಕು.

ಅಧ್ಯಕ್ಷರು.—ನಿನ್ನೆಯ ವಿಷಯವನ್ನು ಮತ್ತೆ ಈಗ ಪ್ರಸ್ತಾಪ ಮಾಡುವುದು ಒಳ್ಳೆಯದಲ್ಲ. ನಿಮಗೆ ಏನಾದರೂ ಹೇಳಬೇಕಾಗಿದ್ದರೆ ನನ್ನ ಚೇಂಬರಿಗೆ ಬಂದು ಪ್ರೈವೇಟಾಗಿ ಹೇಳಬೇಕು. ಮೊದಲು ಚೇಂಬರಿನಲ್ಲಿ ನನಗೆ ಹೇಳಿ ನನ್ನ ಅನುಮತಿಯನ್ನು ತೆಗೆದುಕೊಂಡು ಅನಂತರ ಆ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಮಾಡಿ ಹೇಳಬೇಕು.

ಶ್ರೀ ಎನ್. ಜಿ. ನರಸಿಂಹೇಗೌಡ.—ಒಂದು ನಿಮಿಷದಲ್ಲಿ ನಾನು ಹೇಳುತ್ತೇನೆ.

ಅಧ್ಯಕ್ಷರು.—ನಾನು ಹೇಳಿದ್ದು ನಿಮಗೆ ಅರ್ಥವಾಗಲಿಲ್ಲವೆಂದು ಕಾಣುತ್ತದೆ. ಈಗ ಈ ರೀತಿಯಾಗಿ ಹೇಳುವದಕ್ಕೆ ಪ್ರಾರಂಭಿಸಿದರೆ ಮತ್ತೆ ಕೆಲವು ಸದಸ್ಯರು ಪ್ರಶ್ನೆಗಳನ್ನು ಕೇಳುತ್ತಾರೆ. ಇದರಿಂದ ಸಭೆಯ ಮಹತ್ವದ ವೇಳೆಯನ್ನು ವ್ಯರ್ಥವಾಗಿ ಕಳೆದಂತೆ ಆಗುತ್ತದೆ. ಆದಕಾರಣ ಈಗ ಆ ವಿಷಯವನ್ನು ಎತ್ತಿ ಮಾತನಾಡುವುದು ಒಳ್ಳೆಯದಲ್ಲ. ನೀವೇನನ್ನಾದರೂ ನನಗೆ ಹೇಳಬೇಕಾಗಿದ್ದರೆ ಮೊದಲು ನನ್ನ ಚೇಂಬರಿಗೆ ಬಂದು ಪ್ರೈವೇಟಾಗಿ ನನಗೆ ಹೇಳಬೇಕು. ನೀವು ಹೇಳುವದನ್ನು ನಾನು ಕೇಳುತ್ತೇನೆ. ಶ್ರೀ ನರಸಿಂಹೇಗೌಡರು ಸಭೆಯ ಒಂದು ಪಕ್ಷದ ಸದಸ್ಯರಾಗಿದ್ದಾರೆ. ನಿಮ್ಮ ಪಕ್ಷದ ಪರವಾಗಿ ಯಾವುದೇ ತೊಂದರೆ ಇದ್ದರೆ ಅಥವಾ ನೀವೇನನ್ನಾದರೂ ನನಗೆ ಹೇಳಬೇಕಾಗಿದ್ದರೆ ಮೊದಲು ಚೇಂಬರಿನಲ್ಲಿ ನನಗೆ ತಿಳಿಸಬೇಕು. ನಾನು ಒಪ್ಪಿಕೊಂಡನಂತರ ಆ ವಿಷಯವನ್ನು ಸಭೆಯ ಮುಂದೆ ತಂದು ಚರ್ಚೆ ಮಾಡುವುದು ಅವಶ್ಯಕವಾಗಿದೆಯೆಂದು ಕಂಡುಬಂದರೆ, ಆ ರೀತಿ ಮಾಡೋಣ. ಸಭೆಯ ಮಹತ್ವದ ವೇಳೆಯನ್ನು ವ್ಯರ್ಥವಾಗಿ ಕಳೆಯುವುದು ಒಳ್ಳೆಯದಲ್ಲ. ಸಭೆಯ ಕಾರ್ಯಕಲಾಪವೂ ಸರಿಯಾಗಿ ನಡೆಯಬೇಕು. ಎಲ್ಲ ಸದಸ್ಯರೂ ಸೌಹಾರ್ದದಿಂದ ನಡೆಯಬೇಕು. ಅಂದರೆ ಸಭೆಯ ಕಾರ್ಯಕಲಾಪವು ಸುಗಮವಾಗಿ ಸಾಗುವುದು.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ನನಗೆ ಈಗ ಮಾತನಾಡಲು ಅವಕಾಶ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—Order, order. ನಿಮಗೇನಾದರೂ ಹೇಳುವದು ಇದ್ದರೆ ಮೊದಲು ನನ್ನ ಚೇಂಬರನಲ್ಲಿ ನನಗೆ ತಿಳಿಸಬೇಕು. ಅಲ್ಲಿ ಅದರ ಚರ್ಚೆ ಮಾಡೋಣ. ಸಭೆಯಲ್ಲಿಕೂಡ ಚರ್ಚೆಮಾಡುವುದು ಅವಶ್ಯವಾಗಿದೆ ಎಂದು ಕಂಡುಬಂದರೆ ಅನಂತರ ಆ ವಿಷಯವನ್ನು ಇಲ್ಲಿಯೂ ಚರ್ಚೆ ಮಾಡೋಣ. ಆದರೆ ಎಲ್ಲರೂ ಸೌಹಾರ್ದದಿಂದ ವರ್ತಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

PAPERS LAID ON THE TABLE

Sri M. P. PATIL (Minister for Revenue).—Sir, I beg to lay on the Table.....

Sri M. C. NARASIMHAN (Kolar Gold fields).—Sir, I want to raise a question of privilege.

Mr. SPEAKER.—I have no objection to your raising it, but under the Rules you have to give notice of it in writing. You cannot raise it all of a sudden.

Sri M. P. PATIL.—Sir, I beg to lay on the Table Notification No. R.D. 2 SPS 58, dated 30th January 1958 issued under sub-section (1) of Section 9 of the Mysore Stamp Act, 1900.

Sri H. K. VEERANNA GOWDH (Minister for Public Works).—Sir, I beg to lay on the Table the Mysore Electricity (Taxation on Consumption) Rules, 1957, issued under Section 6 of the Mysore Electricity (Taxation on Consumption) Act, 1950.

COORG BUILDINGS (LEASE AND RENT CONTROL) CONTINUANCE BILL, 1958.

Motion to consider.

Sri M. P. PATIL (Minister for Revenue).—Sir, I beg to move :

That Coorg Buildings (Lease and Rent Control) Continuance Bill, 1958 be taken into consideration

Mr. SPEAKER.—Motion moved :

" That the Coorg Buildings (Lease and Rent Control) Continuance Bill, 1958 be taken into consideration. "